ಹಾಕುತ್ತ ಬೀಳುನಡಿಗಿ ನಡೆಯುತ್ತಲೇ ಮನಿ ಮುಂದ ಬಂದು, ಮುಂಬಾಗಲ ತೋಳು ಹಿಡಕೊಂಡು ತನ್ನ ಮೈಜೋಲಿ ಸಂಭಾಳಿಸುತ್ತ 'ಎಲ್ಲಾ ಲಾಕ್ ಲೇಕ್ ಮಾಡ್ತನ.....ಏನಲೆ ನಾಲಾಯಕ್ ಬೋಸಡಿ, ಮಗಳನ್ನ ಎದಕ ತಯಾರ ಮಾಡಿ ನಿಲ್ಸಿದಿ ಚಿನಾಲ್ ಕೀ, ಅಡ್ಡ ಕಡದೇನ ನಿನ್ನ ರಂಡೆ......' ಅಂತ ಬೈಯ್ಯುತ್ತಾ ಓಲಾಡಿಕೊಂಡು ಬರುವಾಗ ಗೊಮ್ಮೆನ್ನುವ ಸೆರೆ ವಾಸನೆ ಓಣಿ ತುಂಬಾ. ಅಷ್ಟ ಚೆಂದಾನ ಹಾಲ ಬೆಳದಿಂಗಳಿಗೆ ಇಟೀಟ ಮಸಿ ಬಳದಂಗ ಅನಿಸಾಕ ಹತ್ತಿತು. ಇಡೀ ಓಣಿ ಹಾಲಿನಂತಾ ಖುಷಿಗೆ ಒಂದು ಹಿಡಿ ಉಪ್ಪು ಚೆಲ್ಲಿಬಿಟ್ಟಿದ್ದ ಸಂಗಪ್ಪ. 'ಏ ಹುಚ್ಚಡ್ಸು ಶಾಂತಿ ನಿಂಗೇನ ತಲ್ಯಾಗ ಶಗಣಿ ಗ್ವಾತಾ ತುಂಬೇತೇನ.. ಈ ಹುಚ್ಚ ಹಾಟ್ಯಾ ಬರೂದ್ರೊಳಗ ಮನಿ ಜಗಾ ಬಿಡಂತ ಹೇಳಿದ್ನೆಲ ಯಾಕ ದಿಂಗಂತ ನಿಂತಿ' ಅಂತ ಹೊಟ್ಟಿಯೊಳಗಿನ ಸಂಕಟ ತೋಡಿಕೊಳ್ಳುತ್ತ ಬರ್ಯಾಡಿ ಅಳತೊಡಗಿದಳು ಸಂಗವ್ವಕ್ಕ. ಏನೂ ತೋಚದ ಶಾಂತಿ ಸುಮ್ಮಕ ನಿಂತುಬಿಟ್ಟಳು. ಅಣತಿ ದೂರದಲ್ಲಿ ಆಕೆಯನ್ನು ಕರೆಯಲು ಬರುತ್ತಿದ್ದ ಗೆಳತಿಯರು ಅತ್ತಿಂದತ್ತಲೇ ಮರೆಯಾಗಿಬಿಟ್ಟಿದ್ದರು. ಸಂಗಪ್ಪ ಇದ್ದಂತಾವ ಸಂಗವ್ವಕ್ಕನ್ನ ಓಣಿ ನಡುವೆ ದರದರ ಎಳದು ತಂದು ಆಕೆಯ ಹುಣಸೆ ಬೋಟಿನಂತ ಜಡೆ ಹಿಡಿದು ಹಿಗ್ಗಾಮುಗ್ಗಾ ಥಳಿಸಹತ್ತಿದ. ಸಂಗವ್ವಕ್ಕ ಲಬಲಬ ಹೊಯ್ಕಳ್ಳಲು ಶುರುಮಾಡಿದಳು. ಈ ಕುಡಕನ ಉಸಾಬರಿಗೆ ಬರಲು ತಯಾರಿಲ್ಲದೆ ಆಯಿಬಾಯಿಗಳೆಲ್ಲ ಬಾಗಿಲು ಜಡಿಯುತ್ತ 'ದಿನಾ ಸಾಯಾವ್ರಿಗೆ ಅಳಾವ್ರ ಯಾರು ಕರಿಗಾಲ ಭಾಡ್ಯಾ' ಎನ್ನುತ್ತ ಅಗಳಿ ಇಕ್ಕಿದರು. ಎದುರಿಗೆ ಸಂಗಪ್ಪನ ಅಣ್ಣ ಸಿಂಗಪ್ಪನ ಮನಿ ಅಷ್ಟೆ ತೆರೆದುಕೊಂಡಿತ್ತು. ಬಾಯಲ್ಲಿ ಚುಟ್ಟಾ ಒಂದು ಕಡೆ ಹಿಡಕೊಂಡು ಇಣಚಿ ಚಾಪ ಕಡ್ಡಿ ಗೀರುತ್ತಾ ಹೊರಗ ಬಂದು ಒಂದು ದಮ್ ಎಳದ ಸಿಂಗಪ್ಪ, 'ಇಂವಾ ಕುಡದಟ್ಟು ಬರೆ ಕಿವ್ಯಾಗ ಹಾಕೋತೇನ ನಾ, ನಾಲಾಯಕ್ ದುನಿಯಾ ದುನಿಯಾನ ಕುಡಿತ್ಯೆತಿ ನಿನ್ನಂಗ ಯ್ಯಾಂವ ಮಾಡ್ತಾನೊ ಚೋದಿಕೆ' ಅಂದು ಸಂಗವ್ವನ್ನ ಈ ಕ್ಷಣಕ್ಕೆ ಸಂಗಪ್ಪನ ಹಿಡಿತದಿಂದ ಕಾಪಾಡಿ ಸಂಗಪ್ಪನಿಗೆ ಒಂದೆರಡು ತದಕಿ ಕಟ್ಟಿ ಮ್ಯಾಲ ಕೂಡ್ರಿಸಿದ. ಸಂಗವ್ವಕ್ಕ ಶಾಂತಿಯನ್ನ ಒಳಗೆ ಎಳಕೊಂಡು ಕದ ಹಾಕೊಂಡುಬಿಟ್ಟಳು. ನಿಸೆ ಹೆಚ್ಚಾಗಿದ್ದಕ್ಕೂ ಮತ್ತೆ ಅಣ್ಣನಿಂದ ತಿಂದ ಒದೆಗೂ ರೊಳ್ಳಿಗವದ ಸಂಗಪ್ಪ ಕಟ್ಟಿಮ್ಯಾಲ ಖಬರಗೆಟ್ಟು ಬಿದ್ದುಕೊಂಡ.



***

ಇವರ ಮದುವೆ ಆಗಿ ಸರುಸಾದಾರನ ಇಪ್ಪತ್ತು ವರ್ಷ ಆಗಿರಬೇಕು. ಸಂಗಪ್ಪ ಒಂಥರಾ ಹುಟ್ಟುಕುಡುಕ. ಅಪ್ಪ ಬಸವಂತಪ್ಪನ ಕೂಡ ಸಣ್ಣಂದಿರ್ತಲೇ ಕುಡಿತಕ್ಕೆ ಅಂಟಿಕೊಂಡಿದ್ದ. ಪಾಪ ಗಂಡಸಿನಂತಾ ಗಟ್ಯುಳ್ಳ ಸಂಗವ್ವಕ್ಕನ್ನ ಈ ಕುಡಕನಿಗೆ ಯಾವ ಮಾಯಿಲೆ ಜೋಡ ಮಾಡಿಬಿಟ್ಟಿದ್ರು. ಸಂಗಪ್ಪಂದೂ ಹಾಂಗ ನೋಡಿದ್ರೆ ಹೊಲ ಮನಿ ಎಲ್ಲ ಬೇಸಿನೇ ಇತ್ತು. ಕುಡಿತಕ್ಕೆ ಅಂಟಿಕೊಂಡು ಹೊಲ ಎಲ್ಲ ನುಂಗಿ ನೀರು ಕುಡದಾಗಿತ್ತು. ಈ ಪರದೇಸಿಯಂತಾ ಮನಿ ಎಂದೂ ಸುಣ್ಣ ಬಣ್ಣ ಇಲ್ಲದೆ ಸಂಗವ್ವಕ್ಕನ ಕೈಯಿಂದ ಯಾವಾಗಾದ್ರೂ ಒಮ್ಮೆ ಮಟ್ಟಿ ಮೆತ್ತಿಸಿಗೊಂಡು ತುಸು ನೋಡುವಂಗ ಇರ್ತಿತ್ತು. ಮಳಿ ಬಂದ್ರ ಮಾತ್ರ ಮನಿ ತುಂಬಾ ನೆಲ ಅಲ್ಲಲ್ಲಿ ನೆನದು ಕುಕ್ಕಡಿ ಆಗ್ತಿತ್ತು. ಸಂಗವ್ವಕ್ಕನ ಸೌಕಾರ ಗಡ್ಡೆಯ ಕೂಲಿ ಕೆಲಸದ ದುಡ್ಡಿನ ಮೇಲೆಯೇ ಮನೆಯೊಳಗೆ ಆಗಾಗ ವಗ್ಗರಣೆ ವಾಸನಿ. ಇಲ್ಲಂದ್ರ ಅವರಿವರ ಮನಿಯ ತಂಗಳ ಕೂಳಿಗಾಗಿ ಉಡಿಯೊಡ್ಡಿ ನಿಲ್ಲದೆ ವಿಧಿಯೇ ಇರಲಿಲ್ಲ. ಸಂಗವ್ವಕ್ಕನಿಗಿಂತ ಮೊದಲೇ ಕೂಲಿ ಆಳಿನ ಸಾಲಿನಲ್ಲಿ ನಿಂತೊ, ಅಲ್ಲೇ ಆಕೆಯನ್ನು ಥಳಿಸಿಯೊ ದುಡ್ಡೆಲ್ಲ ಮಳ್ಯಾನ ಸೆರೆ ಅಂಗಡಿಯ ಗಲ್ಲೆಗೆ ಸೇರುತ್ತಿದ್ದವು. ಖರೆ ಹೇಳಬೇಕಂದ್ರ ಸಂಗವ್ವಕ್ಕಾ ಹಾರೂಗೇರಿಯ